O.S. ನಂಬರಃ 30/2019

ಡಿ. ಡಬ್ಲ್ಯೂಃ 1

ದಿಃ 02-11-2023 ರಂದು ಸಾಕ್ಷಿಯನ್ನು ಪುನ: ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

<u>ಮುಂದುವರೆದ ಪಾಟಿ ಸವಾಲುಃ ವಾದಿ ಪರ ಶ್ರೀ ಎಸ್.ಯು.ಎ. ವಕೀಲರಿಂದಃ</u>

ನನ್ನನ್ನು ಈ ಹಿಂದೆ ಪಾಟಿ ಸವಾಲಿಗೆ ಅಳವಡಿಸಿದ ನಂತರ ಅಂಗಡಿ ಬಾಡಿಗೆ ಹಣ ಮತ್ತು ಅಂಗಡಿಗೆ ಸಂಬಂಧಿಸಿದ ಡೆಪಾಸಿಟ್ ಎಷ್ಟು ಹಣ ಪಡೆಯಲಾಗಿದೆ ಎಂದು ಇದುವರೆಗೂ ನಾನು ತಾಯಿಯನ್ನು ವಿಚಾರಿಸಿಲ್ಲ. ಸದರಿ ಸಂಗತಿ ಕುರಿತಾಗಿ ತಾಯಿಯನ್ನು ವಿಚಾರಿಸಲು ತೊಂದರೆ ಇಲ್ಲ ಎಂದರೆ ಸಾಕ್ಷಿ, ನಾನು ಆ ರೀತಿ ಕೇಳಲು ಹೋಗುವುದಿಲ್ಲವೆಂದು ಹೇಳುತ್ತಾರೆ. 6 ನೇ ಪ್ರತಿವಾದಿ ಎಷ್ಟು ಬಾಡಿಗೆ ಹಣ ಪಡೆಯುತ್ತಿದ್ದಾನೆಂದು ಕೇಳಲು ಪ್ರಯತ್ನಿಸಿದ್ದೀರಾ ಎಂದರೆ ಇಲ್ಲ ಎಂದು ಹೇಳುತ್ತಾರೆ. ನಾನು ಪುರಸಭೆ ಅಂಕೋಲಾದ ಚುನಾಯಿತ ಸದಸ್ಯನಾಗಿದ್ದೆ ಆದರೆ, ಅದರ ಇಸ್ವಿ ನೆನಪಿಲ್ಲ ಅದರಂತೆ ನನ್ನ ಹೆಂಡತಿಯೂ ಸಹ ಪುರಸಭೆಯ ಚುನಾಯಿತ ಸದಸ್ಯಳಾಗಿದ್ದಳು ಎಂದರೆ ಸರಿ.

ಎ.ಕೆ.ಸ್ಟೀಲ್ ವ್ಯವಹಾರವನ್ನು ಅಬುಬಾಕರ್ ಸಯ್ಯದ್ ಸಾಬರವರ ಪರವಾನಿಗೆ ಮೇರೆಗೆ 7 ನೇ ಪ್ರತಿವಾದಿ ಮಾಡುತ್ತಿದ್ದಾನೆಂದರೆ ಮಾಹಿತಿ ಇಲ್ಲ. ಕರಾರು ಪ್ರಕಾರ ಬಾಡಿಗೆ ಪತ್ರಗಳನ್ನು ನನ್ನ ತಾಯಿ ಇಟ್ಟುಕೊಳ್ಳುತ್ತಿದ್ದಾರೆಯೇ ಎಂದರೆ ವ್ಯವಹಾರ ಅವರು

ನೋಡಿಕೊಳ್ಳುತ್ತಿದ್ದಾರೆ, ಕಾಗದ ಯಾರ ಬಳಿ ಇದೆ ಎಂದು ಗೊತ್ತಿಲ್ಲ ಎಂದು ಹೇಳುತ್ತಾರೆ. ಎ.ಕೆ.ಸ್ಟೀಲ್ ಅಂಗಡಿಯವರು ಪರವಾನಿಗೆ ಸಲುವಾಗಿ ಪುರಸಭೆಗೆ ನೀಡಿದ ಅರ್ಜಿ ಜೊತೆಗೆ ನಾನು ಮತ್ತು 6 ನೇ ಪ್ರತಿವಾದಿ ಸಹಿ ಮಾಡಿದ ಬಾಡಿಗೆ ಕರಾರು ಪತ್ರವನ್ನು ನೀಡಿರುತ್ತಾರೆಂದು ಸಾಕ್ಷಿ ತೋರಿಸಿದ ದಾಖಲೆಯನ್ನು ನೋಡಿ ಸರಿ ಎಂದು ಉತ್ತರಿಸುತ್ತಾರೆ. ಸದರಿ ದಾಖಲೆಯನ್ನು ನಿಪಿ-38 ಎಂದು ಗುರುತಿಸಲಾಯಿತು. ಸದರಿ ದಾಖಲೆಯಲ್ಲಿ ನನ್ನ ಹಾಗೂ 6 ನೇ ಪ್ರತಿವಾದಿ ಸಹಿ ಇದೆ ಎಂದರೆ ಸರಿ.

ಸದರಿ ಎ.ಕೆ.ಸ್ಟೀಲ್ ನವರು ಮಲ್ಟಿಸಿಟಿಯ ಚೆಕ ನಂ. 400956 ರ ಮೂಲಕ ರೂ. 6 ಲಕ್ಷ ಹಣವನ್ನು ದಿಃ 08-11-2012 ರಂದು ಸಿಂಡಿಕೇಟ್ ಬ್ಯಾಂಕ ಶಾಖೆ, ಅಂಕೋಲಾ ರವರಲ್ಲಿಯ ಖಾತೆ ನಂ. 03043010001015 ಕ್ಕೆ ಜಮಾ ಆಗಿದೆ ಎಂದರೆ ಅದು ನನ್ನ ಖಾತೆಯಲ್ಲ ಎಂದು ಹೇಳುತ್ತಾರೆ. ಸದರಿ ನಿಪಿ-38 ರ ಕರಾರಿನ ಪ್ರಕಾರ ಪ್ರತಿದಿನ ರೂ. 800/- ಬಾಡಿಗೆಯನ್ನು ನನಗೆ ನೀಡಬೇಕೆಂದು ಬರೆಯಲಾಗಿದೆ ಎಂದರೆ ಸಾಕ್ಷಿ, ಅದರಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ಪ್ರತಿದಿನ ರೂ. 800/- ರಂತೆ ತಿಂಗಳ ಪೂರ್ತಿ ಹಣವನ್ನು ನಾನು ಪಡೆದರೂ ಸಹ ಸುಳ್ಳು ಹೇಳುತ್ತಿರುವೆ ಎಂದರೆ ಸರಿಯಲ್ಲ. ನನ್ನ ತಾಯಿ ಹಣ ಪಡೆಯುತ್ತಿದ್ದನ್ನು ತೋರಿಸಲು ಅವರ ಸಾಕ್ಷಿ ಮಾಡಿಸಲು ನನಗೆ ತೊಂದರೆ ಇಲ್ಲ ಎಂದರೆ ಸಾಕ್ಷಿ, ಅವರಿಗೆ ಬಹಳ ವಯಸ್ಸಾಗಿದ್ದು, ತಿರುಗಾಡಲು ತೊಂದರೆ ಇದೆ, ಶುಗರ್ ಹಾಗೂ ಬಿಪಿ ಇದೆ ಎಂದು ಹೇಳುತ್ತಾರೆ.

ನನ್ನ ಚಿಕ್ಕಪ್ಪನಾದ ಕೃಷ್ಣಾ ರಾಮಚಂದ್ರ ಶೆಟ್ಟಿ ರವರ ಕುಟುಂಬದವರು ಅಂಕೋಲಾದಲ್ಲಿರುವುದಿಲ್ಲ ಎಂದರೆ ಸರಿ. ಸದರಿ ಕೃಷ್ಣಾರವರು ಅಂದಾಜು 35-40 ವರ್ಷಗಳಿಂದಲೂ ಕಾರವಾರದಲ್ಲಿ ಮನೆ ಕಟ್ಟಿ ಅಲ್ಲಿಯೇ ಉಳಿದಿದ್ದಾರೆ, ಅವರ ಮಕ್ಕಳು ಇಂಜಿನಿಯರ್ ಗಳಾಗಿ ಬೇರೆ ಪಟ್ಟಣಗಳಲ್ಲಿ ಕೆಲಸ ಮಾಡುತ್ತಾರೆ ಎಂದು ಹೇಳುತ್ತಾರೆ. ವಾದಿ ಮನೆ ಕಟ್ಟಲು ಬೇಕಾದ ಸಾಲವನ್ನು ಬ್ಯಾಂಕಿನಿಂದ ಪಡೆಯುವ ಸಮಯದಲ್ಲಿ ನನ್ನ ತಾಯಿ ಬ್ಯಾಂಕಿನ ಹೆಸರಿನಲ್ಲಿ ದಿಃ 16-10-2003 ರಂದು ಪ್ರಮಾಣ ಪತ್ರ ಬರೆದುಕೊಟ್ಟಿದ್ದಳು ಎಂದರೆ ಸಾಕ್ಷಿ ಕುಟುಂಬದ ಸಲುವಾಗಿ ಮಾಡಿದ್ದಾರೆಂದು ಹೇಳುತ್ತಾರೆ. ಸದರಿ ದಾಖಲೆಯನ್ನು ನಿಪಿ-39 ಎಂದು ಗುರುತಿಸಲಾಯಿತು. ನಿಪಿ-39 ರಲ್ಲಿ ನನ್ನ ತಾಯಿ ಸಹಿ ಇರುತ್ತದೆ ಎಂದರೆ ಸಾಕ್ಷಿ, ಅದನ್ನು ನನ್ನ ಮುಂದೆ ಹಾಕಿಲ್ಲ ಎಂದು ಹೇಳುತ್ತಾರೆ.

ಈಗ ನೋಡುತ್ತಿರುವ ದಾಖಲೆ ಮೇಲಿನ ಸಹಿ ನನ್ನದೇ ಇರುತ್ತದೆ. ಸದರಿ ದಾಖಲೆಯನ್ನು ನಿಪಿ-40, ಸಾಕ್ಷಿ ಸಹಿಯನ್ನು ನಿಪಿ-40 ಎ ಎಂದು ಗುರುತಿಸಲಾಯಿತು. ಸದರಿ ವಾದಿ ಆರ್ಯಾದುರ್ಗಾ ಎಂಟರಪ್ರೈಸಸ್ ನಲ್ಲಿ ಸೇಲ್ಸ ರೆಪ್ರೆಸೆಂಟೆಟಿವ್ ಎಂದು 1980 ರಿಂದ ಪ್ರಾಮಾಣಿಕವಾಗಿ ಕೆಲಸ ಮಾಡುತ್ತಿದ್ದಾನೆಂದು ಅದರಲ್ಲಿ ಬರೆದು ಸಹಿ ಮಾಡಿದ್ದೇನೆ ಎಂದರೆ ಸಾಕ್ಷಿ, ಇಂಡಸ್ಟ್ರೀಯಲ್ ಸಹಕಾರಿ ಬ್ಯಾಂಕನವರು ಮಾಡಿಸಿಕೊಂಡಿದ್ದರು ಎಂದು ಹೇಳುತ್ತಾರೆ. ನಾನು 2014 ರಿಂದ ಸೇಂಟ್ ಮಿಲಾಗ್ರಿಸ್ ಕೋ-ಆಪರೇಟಿವ್ ಹಣಕಾಸು ಸಂಸ್ಥೆಯಲ್ಲಿ ಪಿಗ್ಮಿ ಕಲೆಕ್ಟರ್ ಎಂದು ಕೆಲಸಕ್ಕಿದ್ದೇನೆ. ಅದಕ್ಕೂ

ಪೂರ್ವದಲ್ಲಿ ತಾಯಿ ನಡೆಸುವ ಬಟ್ಟೆ ವ್ಯವಹಾರ ನೋಡಿಕೊಂಡು ಹೋಗುತ್ತಿದ್ದೆ. 6 ನೇ ಪ್ರತಿವಾದಿ ಸಹ ಬಟ್ಟೆ ಅಂಗಡಿ ನೋಡಿಕೊಳ್ಳುತ್ತಿದ್ದ. ಸಾಕ್ಷಿ ವಾದಿ ಕೂಡ ಬಟ್ಟೆ ಅಂಗಡಿ ನೋಡಿಕೊಳ್ಳುತ್ತಿದ್ದ ಎಂದು ಹೇಳುತ್ತಾರೆ. ಬಟ್ಟೆ ಅಂಗಡಿಯ ಲಾಭ–ನಷ್ಟ, ಆದಾಯದ ಕುರಿತು ನನ್ನನ್ನು ಪಾಟಿ ಸವಾಲಿಗೆ ಒಳಪಡಿಸಿದ ನಂತರ ತಿಳಿದುಕೊಳ್ಳಲು ಪ್ರಯತ್ನಿಸಿಲ್ಲ ಎಂದರೆ ಅದು ತಾಯಿಗೆ ಸಂಬಂಧಪಟ್ಟಿದ್ದು ಕಾರಣ, ತಿಳಿದುಕೊಂಡಿಲ್ಲ ಎಂದು ಹೇಳುತ್ತಾರೆ.

ಆರ್.ಎಮ್.ಶೆಟ್ಟಿ ರೆಡಿಮೆಡ್ ಗಾರ್ಮೆಂಟ್ಸ ಇದನ್ನು ತಂದೆ ನಂತರ ವಾದಿ ನೋಡಿಕೊಳ್ಳುತ್ತಿದ್ದ. ಆರ್ಯಾದುರ್ಗಾ ಕ್ಲೋಥ ಸ್ಟೋರ್ ಕೂಡ ತಂದೆಯವರದಿದ್ದು, ನಂತರ ನಾವು ಮೂರು ಜನ ಗಂಡು ಮಕ್ಕಳು ನೋಡಿಕೊಳ್ಳುತ್ತಿದ್ದೇವು. ಆರ್.ಎಮ್.ಶೆಟ್ಟಿ ರೆಡಿಮೆಡ್ ಗಾರ್ಮೆಂಟ್ಸನ್ನು ತಂದೆ ಮೃತಪಟ್ಟ ನಂತರ ಅಂದರೆ 2001 ರ ನಂತರ ಪ್ರಾರಂಭವಾಗಿದೆ. ಆರ್.ಎಮ್.ಶೆಟ್ಟಿ ರೆಡಿಮೆಡ್ ಗಾರ್ಮೆಂಟ್ಸ ಇದು ವಾದಿಯ ಸ್ವತಂತ್ರ ವ್ಯವಹಾರವಿದ್ದು, ಅದಕ್ಕೆ ಕುಟುಂಬದ ಯಾವುದೇ ಸಂಬಂಧ ಇರುವುದಿಲ್ಲವೆಂದರೆ ಸರಿಯಲ್ಲ, ಸಾಕ್ಷಿ ಅದರಲ್ಲಿ ಮೊದಲು ನನ್ನ ತಂದೆ ಟೇಲರಿಂಗ್ ಹಾಗೂ ಬಟ್ಟೆ ವ್ಯವಹಾರ ಮಾಡುತ್ತಿದ್ದರು ಎಂದು ಹೇಳುತ್ತಾರೆ. ಆರ್.ಎಮ್.ಶೆಟ್ಟಿ ರೆಡಿಮೆಡ್ ಗಾರ್ಮೆಂಟ್ಸಗೆ ನನ್ನ ತಂದೆ ಅಥವಾ ಕುಟುಂಬದ ವತಿಯಿಂದ ಹೂಡಿಕೆ ಮಾಡಿದ್ದರ ಬಗ್ಗೆ ದಾಖಲೆ ಇಟ್ಟುಕೊಂಡಿಲ್ಲ. ಆರ್.ಎಮ್.ಶೆಟ್ಟಿ ರೆಡಿಮೆಡ್ ಗಾರ್ಮೆಂಟ್ಸ ಇದು ವಾದಿಯ ಹೆಸರಿನಲ್ಲಿದೆ ಎಂದು ತೋರಿಸಿದ ನೋಂದಾಯಿತ ದಾಖಲೆಯನ್ನು ಸಾಕ್ಷಿ, ಅದು

ಕುಟುಂಬದ ವತಿಯಿಂದಿದೆ ಎಂದು ಹೇಳುತ್ತಾರೆ. ಸದರಿ ದಾಖಲೆಯನ್ನು ನಿಪಿ-41 ಎಂದು ಗುರುತಿಸಲಾಯಿತು.

ಎ.ಕೆ.ಸ್ಟೀಲ್ ನವರು ನೀಡಿದ 6 ಲಕ್ಷ ಹಣ ಎಲ್ಲಿದೆ ಎಂದು ನನ್ನ ತಾಯಿಗೆ ಗೊತ್ತು, ಉಳಿದವರಿಗೆ ಮಾಹಿತಿ ಇಲ್ಲ ಎಂದರೆ ಸರಿ. ಎ.ಕೆ.ಸ್ಟೀಲ್ ರವರು ಮೊದಲಿನಿಂದಲೂ ನಮ್ಮ ಕುಟುಂಬಕ್ಕೆ ಪರಿಚಯದವರು. ಸದರಿ 6 ಲಕ್ಷ ರೂ. ಹಣವನ್ನು ಸ್ವತಂತ್ರವಾಗಿ ನಾನು ಬಳಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. 6 ಲಕ್ಷ ಹಣ ಯಾರ ಖಾತೆಗೆ ಜಮಾ ಆಗಿದೆ ಎಂದು ಕಂಡುಕೊಳ್ಳಲು ಬ್ಯಾಂಕಿನಿಂದ ಮಾಹಿತಿ ತರಿಸಿಕೊಳ್ಳಲು ನನ್ನ ತಕರಾರು ಇಲ್ಲ ಎಂದರೆ ಸರಿ. ಎ.ಕೆ.ಸ್ಟೀಲ್ ಹಾಗೂ ಅದರ ಮೇಲಿನ ಮಹಡಿ ಬಾಡಿಗೆ ಹಣ ಇದುವರೆಗೂ ಯಾರು ಪಡೆಯುತ್ತಿದ್ದಾರೆಂದು ನಾನು ವಿಚಾರಿಸಿದ್ದೀರಾ ಎಂದರೆ ಸಾಕ್ಷಿ, ಅದು ತಾಯಿಗೆ ಗೊತ್ತು, ಆ ಬಗ್ಗೆ ನಾನು ವಿಚಾರಿಸಿಲ್ಲ ಎಂದು ಹೇಳುತ್ತಾರೆ.

2007 ರ ನಂತರದಲ್ಲಿ ವಾದಿ ಕಿರಾಣಿ ಅಂಗಡಿಯನ್ನು ಮನೆಯ ಹತ್ತಿರ ಪ್ರಾರಂಭಿಸಿದ್ದರು ಎಂದರೆ ಅದು ಕುಟುಂಬದ ವತಿಯಿಂದ ಇತ್ತು ಎಂದು ಹೇಳುತ್ತಾರೆ. ಸದರಿ ಕಿರಾಣಿ ವ್ಯಾಪಾರದ ಸಲುವಾಗಿ ಹೂಡಿದ ಹಣದ ಬಗ್ಗೆ ನನ್ನ ಬಳಿ ದಾಖಲೆ ಇದೆಯೇ ಎಂದರೆ ಸಾಕ್ಷಿ ಅದು ತಾಯಿಗೆ ಗೊತ್ತು ಎಂದು ಹೇಳುತ್ತಾರೆ. ತಾಯಿ ಕಡೆಯಿಂದ ಸದರಿ ವಿಚಾರ ತಿಳಿದುಕೊಂಡಿದ್ದೀರಾ ಎಂದರೆ ಸಾಕ್ಷಿ, ತಾಯಿ ಬಳಿ ನಾನು ಏನನ್ನೂ ವಿಚಾರಣೆ ಮಾಡುವುದಿಲ್ಲ, ಎಲ್ಲವನ್ನೂ ತಾಯಿಗೆ ಬಿಟ್ಟಿದ್ದೇನೆ ಎಂದು ಹೇಳುತ್ತಾರೆ. ನಾನಂತೂ

ದುಡಿದು ಸಂಪಾದಿಸಿಲ್ಲ, ಆದರೆ ವಾದಿ ದುಡಿದು ಸ್ವಂತ ಗಳಿಸಿದ ಆಸ್ತಿಯನ್ನು ಕುಟುಂಬದ ಆಸ್ತಿಯೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಕಿರಾಣಿ ಅಂಗಡಿ ಹಾಗೂ ಆರ್.ಎಮ್.ಶೆಟ್ಟಿ ರೆಡಿಮೆಡ್ ಗಾರ್ಮೆಂಟ್ಸ ಎರಡೂ ವಾದಿ ಸ್ವಯಾರ್ಜಿತ ವ್ಯವಹಾರಗಳು ಎಂದರೆ ಸರಿಯಲ್ಲ. ವಾದಿ ಕುಟುಂಬದ ವತಿಯಿಂದ ಪಿಗ್ಮಿ ಕಲೆಕ್ಷನ್ ವ್ಯವಹಾರ ಮಾಡುತ್ತಿದ್ದಾನೆಯೇ ಎಂದರೆ ಸಾಕ್ಷಿ ಅದರಲ್ಲಿ ಬಂದ ಹಣದ ಪೈಕಿ ಸ್ವಲ್ಪ ಹಣವನ್ನು ತಾಯಿ ಔಷಧೋಪಚಾರಕ್ಕೆ ಹಾಗೂ ಮನೆ ಖರ್ಚಿಗೆ ನೀಡುತ್ತಾರೆಂದು ಹೇಳುತ್ತಾರೆ. 2003 ರಿಂದ ವಾದಿ ದಿನಂಪ್ರತಿ ಬೆಳಿಗ್ಗೆ ಮನೆಮನೆಗೆ ಹಾಲು ಹಾಕುತ್ತಾರೆಂದರೆ ಅದು ಅವರಿಗೆ ಬಿಟ್ಟಿದ್ದು ಎಂದು ಹೇಳುತ್ತಾರೆ. ಅದೇ ರೀತಿ ವಾದಿ ರೊಟ್ಟಿ ಹಾಗೂ ತಿಂಡಿ ತಿನಿಸುಗಳನ್ನು ಮಾರಾಟ ಮಾಡುತ್ತಾರೆಂದರೆ ನನಗೆ ಮಾಹಿತಿ ಇಲ್ಲ ಎಂದು ಹೇಳುತ್ತಾರೆ.

ನನ್ನ ಹೆಸರಿನಲ್ಲಿ 6–ಗುಂಟೆ ಜಮೀನು ಖರೀದಿಸಿದ್ದೇನೆ ಎಂದರೆ ಸರಿ, ಸಾಕ್ಷಿ ಅದನ್ನು ಕುಟುಂಬದ ವತಿಯಿಂದ ಖರೀದಿಸಿದ್ದು, ನಂತರ ಅದನ್ನು ತಾಯಿ ಮಾರಾಟ ಮಾಡುವಂತೆ ಹೇಳಿದ್ದರಿಂದ ಮಾರಾಟ ಮಾಡಲಾಗಿದೆ ಎಂದು ಹೇಳುತ್ತಾರೆ. ಸದರಿ ಖರೀದಿ ಪತ್ರದಲ್ಲಿ ಹಾಗೂ ನಂತರ ನಾನು ಬರೆದುಕೊಟ್ಟ ಮಾರಾಟ ಪತ್ರದಲ್ಲಿ ಸದರಿ ಆಸ್ತಿ ಸ್ವಯಾರ್ಜಿತ ಇದ್ದು, ಯಾರದ್ದೂ ಎಳ್ಳಷ್ಟು ಹಕ್ಕಿಲ್ಲ ಎಂದು ಬರೆಯಲಾಗಿದೆ ಎಂದರೆ ಆ ಕುರಿತು ದಾಖಲೆಯಲ್ಲಿ ಏನೂ ಬರೆದಿದೆ ಎಂದು ಯಾರೂ ನೋಡುವುದಿಲ್ಲ ಎಂದು ಹೇಳುತ್ತಾರೆ. ಸದರಿ ಆಸ್ತಿ ಮಾರಾಟದ ಹಣ ಯಾರಿಗೂ ನೀಡಿಲ್ಲ, ಅದನ್ನು ನಾನೊಬ್ಬನೇ ಉಪಯೋಗಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ.

ನಾನು ಅಂಕೋಲಾ ಬಿಟ್ಟು ಹೊರಗಡೆ ಯಾವುದೇ ಉದ್ಯೋಗಕ್ಕೆ ಹೋಗಿಲ್ಲ ಎಂದರೆ ಸರಿ. 6 ನೇ ಪ್ರತಿವಾದಿ ಸಹ ಮೂಲಮನೆಯಲ್ಲಿಯೇ ಇದಿದ್ದು, ವ್ಯವಹಾರಕ್ಕೆಂದು ಎಲ್ಲಿಯೂ ಹೋಗಿಲ್ಲ ಎಂದರೆ ಸರಿ. ಅದರಂತೆ ನನ್ನ ತಾಯಿಯೂ ಸಹ ಮನೆಯಿಂದ ಹೊರಗೆ ಹೋಗಿಲ್ಲ ಎಂದರೆ ಸರಿ. ವಾದಿ ಹೆಸರಿನಲ್ಲಿ ದಿಃ 25-06-2003 ರಂದು ಜಮೀನು ಖರೀದಿ ಆಗುವಾಗ ನಾನು, ನನ್ನ ತಾಯಿ ಹಾಗೂ 6 ನೇ ಪ್ರತಿವಾದಿ ಅಂಕೋಲಾದಲ್ಲಿಯೇ ಇದ್ದೇವು ಎಂದರೆ ಸರಿ, ಚಿಕ್ಕಪ್ಪ ಕುಟುಂಬದ ಸಲುವಾಗಿ ಆಸ್ತಿ ನೀಡುತ್ತಿದ್ದರಿಂದ ವಾದಿಯನ್ನು ಮಾತ್ರ ಕಳುಹಿಸಿದ್ದು ನಾವ್ಯಾರೂ ಹೋಗಿರಲಿಲ್ಲ ಎಂದು ಮುಂದುವರೆದು ಹೇಳುತ್ತಾರೆ. ಕುಟುಂಬದ ಪರವಾಗಿ ವಾದಿ ಆಸ್ತಿ ಖರೀದಿಸುತ್ತಿದ್ದಾನೆಂದು ಬರೆಸಲು ನಮಗೆ ತೊಂದರೆ ಇರಲಿಲ್ಲ ಎಂದರೆ ದಾಖಲೆ ಬರೆಯುವುದು ನಾವು ನೋಡಿಲ್ಲ ಎಂದು ಹೇಳುತ್ತಾರೆ. ಕುಟುಂಬದ ವತಿಯಿಂದ ಆಸ್ತಿ ಖರೀದಿಸಿದ ಬಗ್ಗೆ ದಾಖಲೆ ಇದೆಯಾ ಎಂದರೆ ಇಟ್ಟುಕೊಳ್ಳುವುದಿಲ್ಲ ಎಂದು ಹೇಳುತ್ತಾರೆ.

ಮನೆ ಕಟ್ಟಲು ಸಿಂಡಿಕೇಟ್ ಬ್ಯಾಂಕಿನಿಂದ ಪಡೆದ ಸಾಲವನ್ನು ಕುಟುಂಬದ ಹಣದಿಂದ ಮರುಪಾವತಿಸಲಾಗಿದೆ ಎಂದು ತೋರಿಸಲು ದಾಖಲೆ ಇಲ್ಲ ಎಂದರೆ ಸರಿ, ಸಾಕ್ಷಿ ಅದು ತಾಯಿಗೆ ಗೊತ್ತು ಎಂದು ಹೇಳುತ್ತಾರೆ. ಲೋನ್ ಪಡೆಯುವ ಸಮಯದಲ್ಲಿ ಬ್ಯಾಂಕಿನವರು ಲೀಗಲ್ ಓಪಿನಿಯನ್ ಪಡೆಯುತ್ತಾರೆಂದರೆ ಸರಿ. ವಾದಿ ಸಾಲ ಪಡೆಯುವಾಗ ಆಸ್ತಿ ವಾದಿಯ ಮಾಲ್ಕಿಗೆ ಒಳಪಟ್ಟಿದೆಯೆಂದು ಸಿಂಡಿಕೇಟ್ ಬ್ಯಾಂಕಿನ ಕಾನೂನು ಸಲಹಾ ವಕೀಲರಾದ ಆರ್.ಕೆ. ಭಟ್ ರವರು ದಿಃ 15-10-2003 ರಂದು

ಕಾನೂನು ಅಭಿಪ್ರಾಯ ನೀಡಿದ್ದರು ಎಂದರೆ ಆಸ್ತಿ ವಾದಿಯ ಹೆಸರಿನಲ್ಲಿ ಇದ್ದಿದ್ದರಿಂದ ನೀಡಿರಬಹುದೆಂದು ಹೇಳುತ್ತಾರೆ. ಕಟ್ಟಡ ಪರವಾನಿಗೆಯನ್ನು ಸಹ ವಾದಿ ಹೆಸರಿನಲ್ಲಿ ಆಗಿನ ಮುನ್ಸಿಪಾಲಿಟಿಯವರು ನೀಡಿದ್ದಾರೆ ಎಂದರೆ ಇರಬಹುದು ಎಂದು ಹೇಳುತ್ತಾರೆ. ಬ್ಯಾಂಕಿನಿಂದ ಸಾಲ ಪಡೆಯುವಾಗ, ಕಟ್ಟಡ ಪರವಾನಿಗೆ ಪಡೆಯುವಾಗ ಹಾಗೂ ಜಾಗೆ ಖರೀದಿಸುವಾಗ ವಾದಿ ಆಸ್ತಿ ಕುಟುಂಬದ ಆಸ್ತಿಯೆಂದು ನಾವ್ಯಾರೂ ತಕರಾರು ಮಾಡಿಲ್ಲ ಎಂದರೆ ಸರಿ, ಸಾಕ್ಷಿ ಕುಟುಂಬದ ಪರವಾಗಿ ಒಬ್ಬನ ಹೆಸರಿನಲ್ಲಿ ಆಸ್ತಿ ಇದೆ ಎಂದು ತಿಳಿದು ಆ ಸಮಯದಲ್ಲಿ ತಕರಾರು ಮಾಡಿಲ್ಲ ಎಂದು ಹೇಳುತ್ತಾರೆ. ವಾದಿಯ ಹೆಸರಿನಲ್ಲಿ ಮಾತ್ರ ಆಸ್ತಿ ಇದೆ ಎಂದು ತಿಳಿದುಕೊಳ್ಳಲು ಸಾಕಷ್ಟು ಅವಕಾಶ ಇತ್ತು ಎಂದರೆ ಸಾಕ್ಷಿ, ಎಲ್ಲರೂ ಚೆನ್ನಾಗಿ ಇದ್ದುದ್ದರಿಂದ ಹಾಗೂ ತಾಯಿ ಜವಾಬ್ದಾರಿ ಇದ್ದುದ್ದರಿಂದ ನಾವು ಈ ಮೊದಲು ತಕರಾರು ಮಾಡಿಲ್ಲ ಎಂದು ಹೇಳುತ್ತಾರೆ.

ತಾಯಿ ಹೆಸರಿನಲ್ಲಿ ಯಾವ್ಯಾವ ಬ್ಯಾಂಕಿನಲ್ಲಿ ಅಕೌಂಟ್ ಇದೆ ಎಂದು ಮಾಹಿತಿ ಇಲ್ಲ, ಹಾಗೂ ಅದನ್ನು ತಿಳಿದುಕೊಳ್ಳಲು ಪ್ರಯತ್ನಿಸಿಲ್ಲ. ನನ್ನ ತಾಯಿ ಬ್ಯಾಂಕಿನ ವ್ಯವಹಾರವನ್ನು ಸ್ವತಃ ಅವರೇ ಮಾಡಿಕೊಳ್ಳುತ್ತಾರೆಯೇ ಎಂದರೆ ಸಾಕ್ಷಿ, 6 ನೇ ಪ್ರತಿವಾದಿ ಸಹಾಯದಿಂದ ಮಾಡಿಕೊಳ್ಳುತ್ತಾರೆ, ನಾನು ಭಾಗವಹಿಸಿಲ್ಲ ಎಂದು ಹೇಳುತ್ತಾರೆ. ನನ್ನ ತಾಯಿ ಬ್ಯಾಂಕಿನ ವ್ಯವಹಾರದ ಬಗ್ಗೆ 6 ನೇ ಪ್ರತಿವಾದಿಯನ್ನು ಕೇಳಿದ್ದೀರಾ ಎಂದರೆ ಸಾಕ್ಷಿ, ನಾನು ತಾಯಿಯ ಕುರಿತಾಗಿ ಯಾವುದೇ ವಿಷಯ ಕೇಳುವುದಿಲ್ಲವೆಂದು ಹೇಳುತ್ತಾರೆ. ಇನ್ನು ಮುಂದಾದರೂ ಸಹ ತಾಯಿಯ ಬ್ಯಾಂಕ ಖಾತೆ ಬಗ್ಗೆ ತಿಳಿದುಕೊಂಡು ಬಂದು

ಉತ್ತರಿಸುತ್ತೀರಾ ಎಂದರೆ ಸಾಕ್ಷಿ, ನಾನು ತಾಯಿ ಕುರಿತಾಗಿ ಇದುವರೆಗೂ ಕೇಳಿಲ್ಲ, ಇನ್ನು ಮುಂದಾದರೂ ಕೇಳುವುದಿಲ್ಲವೆಂದು ಹೇಳುತ್ತಾರೆ. ವಾದಿ ಖರೀದಿಸಿದ ಆಸ್ತಿ ಮತ್ತು ನಿರ್ಮಿಸಿದ ಕಟ್ಟಡದ ಕುರಿತು ನನ್ನ ಬಾಯಿ ಮಾತಿನ ಸಾಕ್ಷಿ ಹೊರತುಪಡಿಸಿದರೆ ಯಾವುದೇ ಸಾಕ್ಷಿ ಇಲ್ಲ ಎಂದರೆ ಸರಿ.

ನನ್ನ ಎರಡು ಮಕ್ಕಳು ಎಮ್.ಕಾಮ್ ವರೆಗೆ ಓದಿದ್ದಾರೆ. ನನ್ನ ಮಕ್ಕಳ ಶಿಕ್ಷಣದ ಖರ್ಚನ್ನು ತಾಯಿ ನೋಡಿಕೊಂಡಿದ್ದಾರೆ. 6 ನೇ ಪ್ರತಿವಾದಿ ಮಕ್ಕಳು ಇನ್ನೂ ಕಲಿಯುತ್ತಿದ್ದಾರೆ. 6 ನೇ ಪ್ರತಿವಾದಿ ಮಕ್ಕಳಿಗೂ ಸಹ ತಾಯಿಯೇ ಕುಟುಂಬದ ವತಿಯಿಂದ ಹಣ ನೀಡುತ್ತಿದ್ದಾರೆ. ನನ್ನ ತಾಯಿ ಹಣವನ್ನು ನಗದಾಗಿ ನೀಡಿರುತ್ತಾರೆ. ನನ್ನ ತಾಯಿ ಯಾವುದೇ ವ್ಯವಹಾರ ಗೊತ್ತಿಲ್ಲದ ಹೆಣ್ಣು ಮಗಳಿದ್ದು, ನಾನು ಮತ್ತು 6 ನೇ ಪ್ರತಿವಾದಿ ಎಲ್ಲ ವ್ಯವಹಾರ ಮಾಡುತ್ತೇವೆ ಎಂದರೆ ಸರಿಯಲ್ಲ. ವಾದಿಯು ಕಷ್ಟಪಟ್ಟು ಗಳಿಸಿದ ಆಸ್ತಿಯನ್ನು ಕುಟುಂಬದ ಆಸ್ತಿಯೆಂದು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನನ್ನ ಚಿಕ್ಕಪ್ಪನಾದ ಪಾಂಡುರಂಗ ರಾಮಚಂದ್ರ ಶೆಟ್ಟಿ ರವರು ತಮ್ಮ ಕುಟುಂಬದ ಅಡಚಣೆಗೆ ಬೇರೊಬ್ಬರಿಗೆ ಆಸ್ತಿ ಮಾರಾಟ ಮಾಡಿದ್ದಾರೆ ಎಂದರೆ ಸರಿ. ಸದರಿ ಆಸ್ತಿ ಮಾರಾಟದ ಸಮಯದಲ್ಲಿ ಖರೀದಿಸಲು ನಮಗೆ ಹೇಳಿದ್ದರು ಎಂದರೆ ಸಾಕ್ಷಿ, ಅವರು ಹೇಳಿದಷ್ಟು ಹಣ ಕೊಡಲು ನಮ್ಮ ಬಳಿ ಇರಲಿಲ್ಲ ಎಂದು ಹೇಳುತ್ತಾರೆ. ಕುಟುಂಬದ ವತಿಯಿಂದ ಎಷ್ಟು ಹಣ ನನ್ನ ತಾಯಿ ಬಳಿ ಶೇಖರಣೆಯಾಗಿತ್ತು ಎಂದು ಆ ಸಮಯದಲ್ಲಿ

ನಾನು ಕೇಳಲು ಪ್ರಯತ್ನಿಸಿಲ್ಲ. ನನ್ನ ತಾಯಿಯ ಬಳಿ ಕೋರ್ಟ ಕಮಿಷನರ್ ಕರೆದುಕೊಂಡು ಹೋಗಲು ಬ್ಯಾಂಕ ವಿವರ ಹಾಗೂ ವ್ಯವಹಾರದ ಕುರಿತು ಮಾಹಿತಿ ಕಲೆ ಹಾಕಲು ತೊಂದರೆ ಇಲ್ಲ ಎಂದರೆ ಸಾಕ್ಷಿ, ಅವರಿಗೆ ಶುಗರ್ ಬಿಪಿ ಇರುವುದರಿಂದ ಇತ್ತಿತ್ತಲಾಗಿ ಒಂದೊಂದು ಸಮಯದಲ್ಲಿ ಒಂದೊಂದು ತರಹ ಮಾತನಾಡುತ್ತಾರೆ ಎಂದು ಹೇಳುತ್ತಾರೆ.

ಕೃಷ್ಣಾ ರಾಮಚಂದ್ರ ಶೆಟ್ಟಿ ಹಾಗೂ ನಮ್ಮ ನಡುವೆ ಮೂಲದಾವೆ ನಂ. 23/1983 ದಾವೆ ಆಗಿದ್ದರಿಂದ, ನಂತರದ ದಿನಗಳಲ್ಲಿ ಕುಟುಂಬದವರಲ್ಲಿ ಆಸ್ತಿ ಮಾರಾಟ ಮಾಡಿಲ್ಲ ಬದಲಾಗಿ ಹಣ ಪಡೆದು ವಾದಿಗೆ ಮಾರಾಟ ಮಾಡಿದ್ದಾರೆಂದರೆ ಸರಿಯಲ್ಲ, ಸಾಕ್ಷಿ ಅಲ್ಲಿ ಹಿರಿಯರು ವಾಸಿಸುತ್ತಿದ್ದ ಮನೆ, ತುಳಸಿ ಕಟ್ಟೆ ಮತ್ತು ಕುಟುಂಬದ ದೇವರು ಅಲ್ಲಿಯೇ ಇರುವುದರಿಂದ ನಮಗೆ ಮಾರಾಟ ಮಾಡಿದ್ದಾರೆಂದು ಹೇಳುತ್ತಾರೆ. ನಾನು ಅವಕಾಶ ಬಳಸಿಕೊಂಡು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಎರಡು ಅಂಗಡಿಗಳ ಬಾಡಿಗೆ ಭರಪೂರ ಹಣವನ್ನು ನಾನು ಮತ್ತು 6 ನೇ ಪ್ರತಿವಾದಿ ಪಡೆಯುತ್ತಿದ್ದೇವೆ ಎಂದರೆ ಸರಿಯಲ್ಲ. 7 ಮತ್ತು 8 ನೇ ಪ್ರತಿವಾದಿಯರನ್ನು ನ್ಯಾಯಾಲಯಕ್ಕೆ ಕರೆಸಲು ತೊಂದರೆ ಇಲ್ಲ ಎಂದರೆ ಅದು ನನಗೆ ಸಂಬಂಧಪಡದ ವಿಷಯ ಎಂದು ಹೇಳುತ್ತಾರೆ.

ಸುಪ್ರಭಾತ ಹಣಕಾಸು ಸಂಸ್ಥೆಯಲ್ಲಿರುವ ನನ್ನ ಖಾತೆಗೆ 7 ನೇ ಪ್ರತಿವಾದಿ ಎಷ್ಟು ಹಣ ತುಂಬುತ್ತಿದ್ದಾನೆ ಎಂದರೆ ಸಾಕ್ಷಿ, ಅದು ನನ್ನ ವೈಯಕ್ತಿಕ ವ್ಯವಹಾರದ ಹಣ ಎಂದು

ಹೇಳುತ್ತಾರೆ. ಸಾಕ್ಷಿ ಮುಂದುವರೆದು ನನ್ನ ವ್ಯವಹಾರದ ಹಣದಲ್ಲಿ ಬಂದ ಆದಾಯವನ್ನು 7 ನೇ ಪ್ರತಿವಾದಿ ಕಡೆ ನೀಡಿ ಪುನಃ ನನ್ನ ಹೊಲ ಮನೆ ಕೊಡಿಸುವ ಕೆಲಸದ ಕಡೆ ಹೋಗುತ್ತಿದ್ದರಿಂದ ಆತ ನನ್ನ ಪರವಾಗಿ ತುಂಬುತ್ತಿದ್ದ ಎಂದು ಹೇಳುತ್ತಾರೆ. ನಾನು ಹಣ ನೀಡಿದಾಗಲೆಲ್ಲಾ 7 ನೇ ಪ್ರತಿವಾದಿ ಪಿಗ್ಮಿ ತುಂಬುತ್ತಿದ್ದ, ದಿನಾಲೂ 300/– ರೂ. ಹಾಗೂ ಹೆಚ್ಚು ಕಮ್ಮಿ ನೀಡುತ್ತಾ ಬರುತ್ತಿದ್ದೆ ಎಂದು ಹೇಳುತ್ತಾರೆ.

ಜಮೀನು ಕೊಡತೆಗೆದುಕೊಳ್ಳುವ ಏಜೆಂಟರಿಗೆ ನಾನು ತೋರಿಸಿಕೊಡುತ್ತಿದ್ದೆ. ಏಜೆಂಟರು ತುಂಬಾ ಜನ ಇದ್ದಾರೆ, ಆದರೆ ಅವರ ಹೆಸರು ವಿಳಾಸ ವಿಚಾರಿಸಿರುವುದಿಲ್ಲ ಎಂದು ಹೇಳುತ್ತಾರೆ. ಜಮೀನು ಯಾರು ಮಾರಾಟ ಮಾಡುತ್ತಾರೆಂದು ನಾನು ಟಿಪ್ಪಣಿ ಇಟ್ಟುಕೊಳ್ಳುವುದಿಲ್ಲ. ಜಮೀನು ಕೊಡತೆಗೆದುಕೊಳ್ಳುವ ವ್ಯವಹಾರದಲ್ಲಿ ಬಂದ ಕಮಿಷನ್ ಹಣ ಹಾಗೂ ನನ್ನ ವೈಯಕ್ತಿಕ ಹಣದಲ್ಲಿ ಪಿಗ್ಮಿ ಕಟ್ಟಲು 7 ನೇ ಪ್ರತಿವಾದಿ ಕಡೆ ಹಣ ಇಡುತ್ತಿದ್ದೆ. ನನ್ನ ವೈಯಕ್ತಿಕ ವ್ಯವಹಾರ ಎಂದರೆ ಸಣ್ಣ ಪುಟ್ಟ ಕೆಲಸದಿಂದ ಬಂದ ಹಣ. ವೈಯಕ್ತಿಕ ವ್ಯವಹಾರ ಎಂದರೆ ಮಾವಿನ ಹಣ್ಣಿನ ವ್ಯವಹಾರ ಹಾಗೂ ಇತರೆ ವ್ಯವಹಾರ ಎಂದು ಹೇಳುತ್ತಾರೆ. ನನ್ನ ಪಿಗ್ಮಿ ಖಾತೆಗೆ ನೇರವಾಗಿ ನಾನೇ ಹಣ ಕಟ್ಟಲು ಅವಕಾಶ ಇತ್ತು ಎಂದರೆ ಸಾಕ್ಷಿ, ಆತನ ಖಾತೆ ನಾನು ಕೆಲಸ ಮಾಡುತ್ತಿದ್ದ ಸೇಂಟ್ ಮಿಲಾಗ್ರಿಸ್ ಬ್ಯಾಂಕಿನಲ್ಲಿ ಇದ್ದಿದ್ದರಿಂದ ಅಲ್ಲಿ ಹಣವನ್ನು ವಜಾವಟ್ಟು ಮಾಡಿಕೊಳ್ಳುತ್ತಿದ್ದೆ ಎಂದು ಹೇಳುತ್ತಾರೆ. ನನ್ನ ಹೆಸರಿನಲ್ಲಿ ಸುಪ್ರಭಾತ ಸೊಸೈಟಿಯಲ್ಲಿದ್ದ ಪಿಗ್ಮಿ ಖಾತೆಗೆ 7 ನೇ ಪ್ರತಿವಾದಿಯಿಂದ ಹಣ ಬಂದಿಲ್ಲ. ಸುಪ್ರಭಾತ ಸೊಸೈಟಿಯಲ್ಲಿ ನನಗೆ ಸಂಬಂಧಿಸಿದ ಪಿಗ್ಮಿ ಖಾತೆ ಸಧ್ಯ ಇರುವುದಿಲ್ಲ.

ಕುಟುಂಬದ ಆಸ್ತಿಯನ್ನು ವಾದಿ ಪಾಲು ಪಡೆಯಲು ಅರ್ಹನಿರುತ್ತಾನೆ ಹಾಗೂ ಆತ ಖರೀದಿಸಿದ ಆಸ್ತಿ ವಾದಿಯ ಸ್ವಯಾರ್ಜಿತ ಎಂದರೆ ಸರಿಯಲ್ಲ. ಅನುಕೂಲಕ್ಕೆ ತಕ್ಕಂತೆ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ</u> ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

ಸಿವಿಲ್ ನ್ಯಾಯಾಧೀಶರು, ಅಂಕೋಲಾ.